ಪ್ರಮಾಣೀಕರಿಸಲಾದ ದಿನಾಂಕಃ- **30.06.2025.**

ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಹೆಚ್. ಎನ್ ವಕೀಲರಿಂದಃ-

ನಾವು 40 ವರ್ಷಗಳಿಂದ ಕಾಫಿ ಬೆಳೆ ಬೆಳೆಯುತ್ತಿದ್ದೇವೆ. ಒಂದು ಎಕರೆಗೆ ಸಮಾರು ತಲಾ 50 ಕೆ. ಜಿ. ಯ ಸುಮಾರು 30 ರಿಂದ 40 ಚೀಲಗಳಷ್ಟು ಒಣಗಿದ ಕಾಫಿ ಸಿಗುತ್ತದೆ. ಒಂದು ಎಕರೆಗೆ ಕೇವಲ 10 ರಿಂದ 15 ಚೀಲಗಳಷ್ಟು ಒಣಗಿದ ಕಾಫಿ ಮಾತ್ರ ಸಿಗುತ್ತದೆ ಎಂದರೆ ಸರಿಯಲ್ಲ. ನಿ. ಪಿ. 10 ರಲ್ಲಿ 3 ಲಕ್ಷ ಮತ್ತು 5 ಲಕ್ಷ ಸಾಲ ಇದೆ ಎಂದರೆ ಸರಿ. ನಿ.ಪಿ. 11 ರಲ್ಲಿ 2 ಲಕ್ಷ 75 ಸಾವಿರ ಇದೆ ಎಂದು ದಾಖಲೆಯಲ್ಲಿದೆ, ಆದರೆ ಸಾಲ ಇರುವುದಿಲ್ಲ. ನಿ.ಪಿ. 11 ರಲ್ಲಿ Court stay order ಇದೆ ಎಂದರೆ ಸರಿಯಲ್ಲ, ಅದು ಉಪ ವಿಭಾಗಾಧಿಕಾರಿ ಮಡಿಕೇರಿಯ ಆದೇಶವಾಗಿದ್ದು, ಆ ಆದೇಶ ಈಗ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ. ನಿ. ಪಿ. 13 ಆರ್. ಟಿ. ಸಿ ಯಲ್ಲಿ ಉಳುಮೆ ಮಾಡುತ್ತಿರುವ ವ್ಯಕಿಗಳು ಕಾಶಿ, ಮಲ್ಲಂಗಡ ಗಣಪತಿ ಇದೆ ಎಂದರೆ ಸರಿ, ಆದರೆ ಅದು ನನ್ನ ಸ್ವಾದೀನದಲ್ಲಿದೆ. ನಿ. ಪಿ. 13 ಆರ್. ಟಿ. ಸಿ ಯಲ್ಲಿ 3 ಲಕ್ಷ ಮತ್ತು 5 ಲಕ್ಷ ಸಾಲ ಇದೆ ಎಂದು ನಮೂದು ಇದೆ ಎಂದರೆ ಸರಿ, ಆದರೆ ಅದು ಮೇಲೆ ಹೇಳಿದ ಸಾಲವಾಗಿದ್ದು ಬೇರೆ ಸಾಲವಾಗಿರುವುದಿಲ್ಲ. ನಿ. ಪಿ. 14 ರಲ್ಲಿ ಆರ್. ಟಿ. ಸಿ ಯಲ್ಲಿ 3 ಲಕ್ಷ ಮತ್ತು 5 ಲಕ್ಷ ಸಾಲ ಇದೆ ಎಂದು ನಮೂದು ಇದೆ ಎಂದರೆ ಸರಿ, ಆದರೆ ಅದು ಮೇಲೆ ಹೇಳಿದ ಸಾಲವಾಗಿದ್ದು ಬೇರೆ ಸಾಲವಾಗಿರುವುದಿಲ್ಲ.

ನಿ. ಪಿ. 14 ರಲ್ಲಿ ಎಂ. ಆರ್. ರಂತೆ ವಿಭಾಗತೋರಿಸಿದೆ ಎಂದರೆ ಸರಿ, ಅದು ನಮ್ಮ ಕುಟುಂಬದ ಒಡಂಬಡಿಕೆಯಿಂದ ಆಗಿದ್ದು, ಅದು ನನ್ನ ಹೆಸರಿನಲ್ಲಿರುತ್ತದೆ. ನಾನು ಈಗಾಗಲೇ ಮಾರಾಟ ಆಗಿರುವ ಆಸ್ತಿಗಳನ್ನು ನನ್ನ ಭಾವ ಪಿ ಡಿ. ಓ ರವರ ಜೊತೆ ಶಾಮಿಲಾಗಿ ಮೇಲೆ ಹೇಳಿದ ಆರ್. ಟಿ. ಸಿ ಗಳಲ್ಲಿ ನನ್ನ ಹೆಸರನ್ನು ಸೇರಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. Karnataka Grameen bank karmadu ರವರು

ನನ್ನ ವಿರುದ್ದ FDP 1/2020 ಕೂಡ ಹಾಕಿರುತ್ತದೆ ಎಂದರೆ ಸರಿ, ಆದರೆ ಅದು ಇತ್ಯರ್ಥವಾಗಿರುತ್ತದೆ. ನಾನು ಹಾಜರುಪಸಿಡಿರುವ ಆರ್. ಟಿ. ಸಿ ಗಳಲ್ಲಿ 5 ಎಕರೆಗೆ ಮೇಲ್ಪಟ್ಟಿಲ್ಲ ಮತ್ತು ನಾನು ಹೇಳುವಷ್ಟು ಕಾಫಿ ಬೆಳೆಯುವುದಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿಗೆ ದೂರಿನಲ್ಲಿ ಹೇಳಿರುವಷ್ಟು ಕಾಫಿ ಮತ್ತು ಮೆಣಸು ಬೆಳೆಯನ್ನು ಒದಗಿಸಲು ಅಷ್ಟು ಭೂಮಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನನ್ನಿಂದ ಈ ಬೆಳೆಗಳನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಚೆಕ್ ಅನ್ನು ನಾನು ಪರಮೇಶರವರಿಂದ ಪಡೆದು ಪ್ರಕರಣ ದಾಖಲಿಸಿ ಅದನ್ನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ